**ಓ.ಎಸ್. ನಂ. 630/2014 ಡಿ. ಡಬ್ಲ್ಯೂ-1 ಹೆಸರು - ಬಸವಣ್ಣ**

ಸಾಕ್ಷಿಯನ್ನು ದಿನಾಂಕಃ **12/11/2020** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಕೆ.ಎಸ್.ಎಂ. ವಕೀಲರಿಂದಃ-

ನನಗೆ 67 ವರ್ಷ. ನನ್ನ ತಂದೆಯ ಹೆಸರು ರಾಚಪ್ಪನ ಮಲ್ಲಪ್ಪ. ನನ್ನ ತಾಯಿ ಸಾಕಮ್ಮ ಎಂದರೆ ಸರಿ. ಸಾಕಮ್ಮ ನನ್ನ ತಂದೆಗೆ 2 ನೇ ಹೆಂಡತಿ ಎಂದರೆ ಸರಿ. 1 ಮತ್ತು 2 ನೇ ವಾದಿಗಳ ತಂದೆ ಜವನಪ್ಪ ಎಂದರೆ ಸರಿ. ಜವನಪ್ಪ ಮತ್ತು ಮಾದಣ್ಣ ಅಂದರೆ 1 ಮತ್ತು 2 ನೇ ವಾದಿಗಳ ತಂದೆ ಮತ್ತು ಪ್ರತಿವಾದಿ 1 ಮತ್ತು 2 ಗಳ ತಂದೆ ಅಣ್ಣ ತಮ್ಮ ಎಂದರೆ ಸರಿಯಲ್ಲ. ಜವನಪ್ಪ ನ ತಾಯಿ ಹೆಸರು ಜವನಮ್ಮ ಎಂದರೆ ಇರಬಹುದು. ಈ ಜವನಮ್ಮ ರಾಚಪ್ಪ ಮಲ್ಲಪ್ಪ ಎಂದರೆ ನನ್ನ ತಂದೆಯ ಮೊದಲನೇಯ ಹೆಂಡತಿ ಎಂದರೆ ಸರಿ. ನನ್ನ ತಂದೆ ರಾಚಪ್ಪ ಮಲ್ಲಪ್ಪ 1997 ರಲ್ಲಿ ತೀರಿಕೊಂಡಿರುತ್ತಾರೆ. 1973 ನೇ ಇಸವಿಯಲ್ಲಿ ಬಾಯಿ ಮಾತಿನ ವಿಭಾಗ ವಾಯಿತು ಎಂದು ಏನು ನನ್ನ ತಕರಾರಿನಲ್ಲಿ ಹೇಳಿದ್ದೇನೆ ಆಗ ನನ್ನ ತಂದೆ ಬದುಕಿದ್ದರು. 1973 ನೇ ಇಸವಿಯಲ್ಲಿ ಜವನಮ್ಮ , ಜವನಪ್ಪ , ಮಾದಣ್ಣ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. 1 ನೇ ವಾದಿಯನ್ನು ನಾನು ನನ್ನ ಊರಿನಲ್ಲಿ ನೋಡುತ್ತಿರುತ್ತೇನೆ ಆದರೆ ಅವನು ಏನು ಕೆಲಸ ಮಾಡುತ್ತಾನೆ ಎಂದು ನನಗೆ ಗೊತ್ತಿಲ್ಲ. 1 ನೇ ವಾದಿ ಇತ್ತೀಚಿಗೆ ಅಹಲ್ಯ ಗ್ರಾಮಕ್ಕೆ ಬಂದಿರುತ್ತಾನೆ. ಹೊಸಮಾಳದಲ್ಲಿ 1 ನೇ ವಾದಿ ವಾಸವಾಗಿರುತ್ತಾನೆ. ಅವು ಸರ್ಕಾರದ ಮನೆಗಳು ಆಗಿರುತ್ತವೆ. 1 ನೇ ವಾದಿ ಇರುವ ಮನೆ ಯಾರ ಹೆಸರಿಗೆ ಅಂದರೆ ಜವನಪ್ಪ ನ ಹೆಸರಿಗೆ ಅಥವಾ ಮಾದಣ್ಣನ ಹೆಸರಿಗೆ ಇತ್ತೋ ನನಗೆ ಗೊತ್ತಿಲ್ಲ. 1973 ರಲ್ಲಿ ಆಸ್ತಿಗಳು ಭಾಗ ಆಗಿರಲಿಲ್ಲ ಎಂದರೆ ಸರಿ. 1 ಮತ್ತು 2 ವಾದಿಗಳು ಮಲ್ಲಪ್ಪನವರ ವಾರಸುದಾರರು ಎಂದರೆ ಸರಿಯಲ್ಲ. ಮಲ್ಲಪ್ಪನವರ ಮೊದಲನೇ ಹೆಂಡತಿ ಜವನಮ್ಮ ರವರ ಮೊದಲನೇ ಮಗ ಜವನಮ್ಮ ರವರ ಮಕ್ಕಳು 1 ಮತ್ತು 2 ವಾದಿಗಳಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಸಾಕಮ್ಮ ಎರಡು ಸಾವಿರದ ಚಿಲ್ಲರೆ ವರ್ಷದಲ್ಲಿ ತೀರಿಕೊಂಡಿರುತ್ತಾರೆ. ಮೊದಲನೇ ಹೆಂಡತಿ ತೀರಿಕೊಂಡ ನಂತರ ಸಾಕಮ್ಮ ರವರ ಜೊತೆ ಮಲ್ಲಪ್ಪ ಮದುವೆ ಆದರು. ಮೊದಲನೇ ಹೆಂಡತಿ ಜವನಮ್ಮ ಬದುಕಿದ್ದಾಗ ನನ್ನ ತಾಯಿ ಸಾಕಮ್ಮ ರವರ ಜೊತೆ ನನ್ನ ತಂದೆಯ ಮದುವೆ ಆಗಿರುತ್ತದೆ ಎಂದರೆ ಸರಿಯಲ್ಲ.

ಮಲ್ಲಪ್ಪರವರ ಮೊದಲನೇ ಹೆಂಡತಿ ಜವನಮ್ಮ ರವರ ಮೊದಲನೇ ಮಗ ಜವನಪ್ಪ ಅಹಲ್ಯ ದಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಜವನಪ್ಪ ಎಂಬ ಮಗನೇ ಇರಲಿಲ್ಲ . ಮಲ್ಲಪ್ಪರವರ ಮೊದಲನೇ ಹೆಂಡತಿ ಜವನಮ್ಮ ರವರ ಮೊದಲನೇ ಮಗ ಜವನಪ್ಪ ಇದ್ದ ಎಂದರೆ ಸರಿಯಲ್ಲ. ಸದರಿ ಜವನಪ್ಪನ ವಾರಸುದಾರರೇ ವಾದಿಗಳು ಎಂದರೆ ಸರಿಯಲ್ಲ. ನನ್ನ ತಂದೆ 1997 ರಲ್ಲಿ ತೀರಿಕೊಂಡ ನಂತರ ಪೌತಿ ಖಾತೆ ಯಾಗಿದ್ದು

ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ವಾದಿಗಳು ಆಸ್ತಿಗಳಲ್ಲಿ ಭಾಗ ಕೊಡಬೇಕು ಎಂದು ವಾದಿಗಳು ನಮ್ಮ ಕುಟುಂಬದ ಸದಸ್ಯರೇ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ
ಸಹಿ/-

1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು